ದಿನಾಂಕ: 07-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಶ್ರೀ.ಎಸ್.ಎಮ್.ಬಿ. ಪ್ರತಿವಾದಿ **1,2, 4** ರಿಂದ **6** ಪರ ವಕೀಲರಿಂದಃ

5. ಯಮನಪ್ಪ ಇವರಿಗೆ 3 ಜನ ಗಂಡು ಮಕ್ಕಳು 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳು ವೀರುಪಾಕ್ಷಿ, ರಾಮಪ್ಪ ಮತ್ತು ಬಾಳಪ್ಪ. ಹೆಣ್ಣು ಮಕ್ಕಳ ಹೆಸರು ಗಂಗವ್ವ, ಸುಶವ್ವ ಮತ್ತು ಅಣ್ಣವ್ವ. ವೀರುಪಾಕ್ಷಿ ಈಗ ತೀರಿಕೊಂಡಿರುತ್ತಾರೆ. ಸದರಿ ವೀರುಪಾಕ್ಷಿ ಇವರ ಹೆಂಡತಿ ಮಕ್ಕಳು ಎಷ್ಟು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ವೀರುಪಾಕ್ಷಿಗೆ ಗಂಗವ್ವ ಎಂದು ಹೆಂಡತಿ ಹಾಗೂ ಸುರೇಶ ಮತ್ತು ಧ್ರಾಕ್ಷಾಯಣಿ ಎಂದು ಇಬ್ಬರು ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜ ಸದರಿಯವರಿಗೆ ಕೊಡುವುದನ್ನು ಕೊಟ್ಟು ಮುಗಿಸಿದ್ದರಿಂದ ಈ ಮೇಲೆ ಹೇಳಿದವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಸೇರಿಸದೇ ಇದ್ದುದ್ದರಿಂದ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರನ್ನು ನಾನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂರೆ ಸರಿಯಲ್ಲ.

6. ನನ್ನ ಮುತ್ತಜ್ಜ ಕಾಡಪ್ಪ ಇವರಿಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. 3 ಜನ ಹೆಣ್ಣು ಮಕ್ಕಳಿದ್ದಾರೆ. ಅವರುಗಳ ಹೆಸರು ದೊಡ್ಡಯಮನವ್ವ, ಸಣ್ಣಯಮನವ್ವ ಮತ್ತು ನಿಂಗೂರವ್ವ ಎಂದು ಇರುತ್ತದೆ. ದೊಡ್ಡಯಮನವ್ವ ಇವರಿಗೆ ಮದುವೆ ಆಗಿದ್ದು ಅವರಿಗೆ ಗಂಡ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. ದೊಡ್ಡಯಮನವ್ವ ಇವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಹಾಗೂ ದೊಡ್ಡಯಮನವ್ವ ಇವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಸದರಿ ದೊಡ್ಡಯಮನವ್ವ ಇವರ ಗಂಡ ಮತ್ತು ಮಕ್ಕಳನ್ನು

ಈ ದಾವೆಯಲ್ಲಿ ಸೇರಿಸದೇ ಇದ್ದುದ್ದರಿಂದ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ.

7. ಸಣ್ಣಯಮನವ್ವ ಇವರ ಗಂಡನ ಹೆಸರು ನನಗೆ ಗೊತ್ತಿಲ್ಲ . ಅದೇ ರೀತಿ ಅವರಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾತಪ್ಪ ಮಗದುಮ್ಮ ಸಣ್ಣಯಮನವ್ವ ಇವರ ಗಂಡ ಎಂದರೆ ನನಗೆ ಗೊತ್ತಿಲ್ಲ. ನಿಂಗೂರೆವ್ವ ಇವರ ಗಂಡನ ಹೆಸರು ಗೊತ್ತಿಲ್ಲ. ನಿಂಗೂರೆವ್ವ ಇವರ ಗಂಡ ಹೆಸರು ಮಲ್ಲಪ್ಪ ಬಸ್ತವಾಡ ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರುಗಳು ಸಂಗಪ್ಪ, ದುಂಡಪ್ಪ, ಶಿವಕ್ಕಾ ಹಾಗೂ ನಾಗವ್ವ ಎಂದರೆ ನನಗೆ ಗೊತ್ತಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಸೇರಿಸದೇ ಇದ್ದುದ್ದರಿಂದ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಅವಶ್ಯಕ ಇರುವ ಪಕ್ಷಗಾರರನ್ನು ಸೇರಿಸದೇ ಇದ್ದುದ್ದರಿಂದ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯ ಉತಾರವನ್ನು ನೋಡಿದ್ದು ಅದರಲ್ಲಿ ಗುರಪ್ಪ ದುಂಡಪ್ಪ ಹುಲ್ಲೋಳಿ, ಬಾಳಪ್ಪ ಯಮನಪ್ಪ ಹುಲ್ಲೋಳಿ, ಕೆಂಪಣ್ಣಾ ನಿಂಗಪ್ಪ ಹುಲ್ಲೋಳಿ, ಶಿವಲಿಂಗಪ್ಪ ನಿಂಗಪ್ಪ ಹುಲ್ಲೋಳಿ, ನೀಲವ್ವ ಕಾಡಪ್ಪ ಹುಲ್ಲೋಳಿ, ಲಕ್ಷ್ಮಣ ಕಾಡಪ್ಪ ಹುಲ್ಲೋಳಿ, ಬಾಳಪ್ಪ ಕಾಡಪ್ಪ ಹುಲ್ಲೋಳಿ, ನಾಗಪ್ಪ ಕಾಡಪ್ಪ ಹುಲ್ಲೋಳಿ, ಶಿವಲಿಂಗಪ್ಪ ಕಾಡಪ್ಪ ಹುಲ್ಲೋಳಿ, ಗುರುಪಾದ ಕಾಡಪ್ಪ ಹುಲ್ಲೋಳಿ, ಬಸವರಾಜ ಕೆಂಪಣ್ಣಾ ಹುಲ್ಲೋಳಿ, ಶಾಂತವ್ವ ಕೆಂಪಣ್ಣಾ ಹುಲ್ಲೋಳಿ, ನಿರ್ಮಲಾ ಸಂಜು ಸಪಾಟ ಇವರುಗಳ ಹೆಸರು ಇವೆ. ಉತಾರದಲ್ಲಿ 4 ನೇ ಪ್ರತಿವಾದಿಯ ಹೆಸರು ಸಹ ದಾಖಲ ಇದೆ ಎಂದರೆ ಸರಿ.

9. ದಾವಾ ಆಸ್ತಿಯ ಉತಾರದಲ್ಲಿ ಕರ್ನಾಟಕ ನೀರಾವರಿ ನಿಗಮ ಎಂದು ಸಹ ನಮೂದು ಇದೆ ಎಂದರೆ ಸರಿ. ಕರ್ನಾಟಕ ನೀರಾವರಿ ನಿಗಮಯವರನ್ನು ಈ ದಾವೆಯಲ್ಲಿ ಸೇರಿಸದೇ ಇದ್ದುದ್ದರಿಂದ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ.

10. ಈ ದಾವೆಯಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಎಲ್ಲ ಆಸ್ತಿಗಳ ಉತಾರ ಹಾಜರ ಮಾಡಿಲ್ಲ ಮತ್ತು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಎಲ್ಲ ಸದಸ್ಯರನ್ನು ಸೇರಿಸಿಲ್ಲ. ಆದ್ದರಿಂದ ಈ ದಾವೆ ನಡೆಯುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನಗೆ ಏನೂ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಡಿಸೆಂಬರ್ 2023 ರಲ್ಲಿ ನಾವು ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿಯ ನಮ್ಮ ಪಾಲು ಕೇಳಿದೆವು. ಡಿಸೆಂಬರ್ 2023 ರಲ್ಲಿ ನಾವು ಪಾಲು ಕೇಳಿದರೂ ಪ್ರತಿವಾದಿಯರು ಪಾಲು ಕೊಡಲು ಒಪ್ಪಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಎಂದೂ ಕಬ್ಜೆ ವಹಿವಾಟಿಯಲ್ಲಿ ಇಲ್ಲ, ದಾವಾ ಆಸ್ತಿಗಳಿಗು ನನಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಈಗಾಗಲೇ ಪಾಲು ಮಾಡಿಕೊಂಡು ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಕಬ್ಜಾ ವಹಿವಾಟಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ